ಕರ್ನಾಟಕ ವಿಧಾನ ಸಭೆ

ಮಂಗಳವಾರ, 7ನೇ ಫೆಬ್ರುವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅವರು ಪೀಠವನ್ನು ಅಲಂಕರಿಸಿದರು.

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ : ಸರ್ಕಾರಿ ನೌಕರರಿಗೆ ಒದಗಿಸಲಾಗುವ ವಸತಿ ಗೃಹಗಳ ನಿರ್ಮಾಣದ ಬಗ್ಗೆ

ಪ್ರಶ್ನೆ : 182 (325) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರಿನಲ್ಲಿ ರಾಜ್ಯ ಸರ್ಕಾರಿ ನೌಕರರು ವಸತಿ ಗೃಹಗಳಿಗಾಗಿ ಪರಿತಪಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸದರಿ ನೌಕರರಿಗೆ ಸಾಕಷ್ಟು ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ;

ಇ) ರಾಜಾಜಿನಗರ ಮತ್ತು ಹೊಂಬೇಗೌಡನಗರಗಳಲ್ಲಿ ಹಾಲಿ ಇರುವ ವಸತಿ ಗೃಹಗಳ ಹಿಂಭಾಗ ಅಥವಾ ಮುಂಭಾಗದಲ್ಲಿ ಇದೇ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಖಾಲಿ ಜಮೀನಿನಲ್ಲಿ ವಸತಿ ಗೃಹದ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಸರ್ಕಾರ ಎಂದಿನಿಂದ ಪ್ರಾರಂಭಿಸುತ್ತದೆ, ಹಾಗೂ ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುತ್ತದೆ?

ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ಸರ್ಕಾರಿ ವಸತಿ ಗೃಹಗಳ ನಿರ್ಮಾಣ ಕಾರ್ಯಗಳನ್ನು ಆಂಗೀಕೃತ ಬಡ್ಜೆಟ್ಟಿನ ಪ್ರಕಾರ ಕಾಮಗಾರಿಗಳನ್ನು ಮಾಡಿಸಲಾಗುತ್ತದೆ.

ಇ) ರಾಜಾಜಿನಗರದಲ್ಲಿರುವ ಖಾಲಿ ನಿವೇಶನವು ತಾಂತ್ರಿಕವಾಗಿ ಮುಖ್ಯ ವಾಸ್ತುಶಿಲ್ಪಿಯವರ ಅಭಿಪ್ರಾಯದಲ್ಲಿ ನಿವೇಶನಕ್ಕೆ ಸರಿ ಇರುವುದಿಲ್ಲ. ಆದುದರಿಂದ ಆ ಕೆಲಸವು ಸದ್ಯಕ್ಕೆ ತಟಸ್ಥವಾಗಿರುತ್ತದೆ. ಬೇರೆ ನಿವೇಶನವನ್ನು ದೊರಕಿಸಲು ಪ್ರಯತ್ನಿಸಲಾಗುತ್ತಿದೆ.

ಹೊಂಬೇಗೌಡನಗರದಲ್ಲಿ (ಸುನಕಲ್ ಫಾರಂ) ವಸತಿ ಗೃಹಗಳನ್ನು ಕಟ್ಟುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ ನನಗೆ ಉತ್ತರ ಬಂದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.— ಉತ್ತರ ಕಳುಹಿಸಿಕೊಡುತ್ತೇನೆ

ಶ್ರೀ ಎಂ. ಎಸ್. ಕೃಷ್ಣನ್ — ಮಾನ್ಯ ಮಂತ್ರಿಗಳು ಸರ್ಕಾರಿ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಆಂಗೀಕೃತ ಬಡ್ಜೆಟ್ಟಿನ ಪ್ರಕಾರ ಮಾಡಿಸಲಾಗುತ್ತದೆ ಎಂದು ಹೇಳಿದ್ದಾರೆ. ಕಳೆದವರ್ಷ ಬಡ್ಜೆಟ್‌ನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ? ಈ ವರ್ಷದ ಬಡ್ಜೆಟ್‌ನಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರಿ? ಎಷ್ಟು ವರ್ಷಗಳಲ್ಲಿ ಇದನ್ನು ಮುಗಿಸುವುದಕ್ಕೆ ಆಗುತ್ತದೆ, ಎನ್ನುವ ವಿವರಗಳನ್ನು ಕೊಡುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು.— ಬಡ್ಜೆಟ್ ಇನ್ನೂ ಬಂದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.— ಬಡ್ಜೆಟ್‌ನಲ್ಲಿ ಹೆಚ್ಚು ಹಣದ ಪ್ರಾವಿಜನ್ ಮಾಡಿಕೊಳ್ಳಲಿಕ್ಕೆ ಕೊರತೆ ಇದೆ. ನಮ್ಮ ಸರ್ಕಾರ ನೀರಾವರಿ ಬಗ್ಗೆ ಹೆಚ್ಚು ಆದ್ಯತೆ ಕೊಡುತ್ತಿರುವುದರಿಂದ ಕಟ್ಟಡಗಳನ್ನು ಕಟ್ಟುವತಕ್ಕ ಬಗ್ಗೆ ನಿಧಾನ ಪ್ರವೃತ್ತಿಯನ್ನು ಅನುಸರಿಸಬೇಕಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.— ಇದು ವಸತಿ ಪ್ರಶ್ನೆ. ಕಟ್ಟಡಗಳಾಗಿದ್ದರೆ ಬೇರೆ, ಇದು ಸರ್ಕಾರಿ ನೌಕರರಿಗೆ ವಸತಿ ಗೃಹಗಳನ್ನು ಕಟ್ಟಿಸತಕ್ಕ ವಿಚಾರ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ.— ಸರ್ಕಾರಿ ನೌಕರರಿಗೆ ವಸತಿ ಇಲ್ಲದೇ ಇರುವುದು ಸರ್ಕಾರದ ಗಮನದಲ್ಲಿದೆ. ಆದ್ದರಿಂದ ಹುಡ್ಕೋ ಸ್ಕೀಮ್‌ನಲ್ಲಿ 316ಲಕ್ಷ ರೂಪಾಯಿಗಳನ್ನು ಒದಗಿಸಿಕೊಂಡು ಸರ್ಕಾರಿ ನೌಕರರ ವಸತಿಗಾಗಿ ಕೆಲಸ ನಡೆಯುತ್ತಿದೆ. ಜೊತೆಗೆ ಕರ್ನಾಟಕ ಹೌಸಿಂಗ್ ಬೋರ್ಡ್‌ನವರು

480 ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಹೀಗೆ ಬೇರೆ ಬೇರೆ ಇಲಾಖೆಗಳ ಮತಿಯಿಂದ ಬರತಕ್ಕ ಕಟ್ಟಡ ಗಳನ್ನು ಪರಿಶೀಲನೆ ಮಾಡಿ, ಸರ್ಕಾರ ನೇರವಾಗಿ ಹಣ ತೊಡಗಿಸುವುದಕ್ಕೆ ಕಷ್ಟವಾದರೂ, ಹುಡ್ಕೋ ಸ್ಕೀಮ್‌ನಿಂದ ಹಣ ಪಡೆಯುವುದಕ್ಕೆ ಪ್ರಯತ್ನ ನಡೆಸುತ್ತಿದೆ. ಸಾಲದ ರೂಪದಲ್ಲಿ ಹಣವನ್ನು ಪಡೆದು ನೇಕರರು ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಹಣವನ್ನು ಮೊಸಲಾಗಿ ಇಟ್ಟಿದ್ದೇವೆ ಎಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಬೆಂಗಳೂರು ಮಹಾನಗರದಲ್ಲಿ ಮನೆಗಳ ಕೊರತೆ ತುಂಬಾ ಇದೆ. ಹಣದ ಮುಗ್ಗಟ್ಟು ಇರುವುದರಿಂದ ಸರ್ಕಾರ ಅವರ ಬೇಡಿಕೆಯನ್ನು ಪೂರ್ಣವಾಗಿ ಈಡೇರಿಸಲಿಕ್ಕೆ ಆಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನನ್ನ ಮತ್ತೊಂದು ಪ್ರಶ್ನೆಗೆ ರಾಜಾಜಿನಗರದಲ್ಲಿರುವ ಖಾಲಿ ನಿವೇಶನ ತಾಂತ್ರಿಕವಾಗಿ ಮುಖ್ಯವಾಸ್ತುಶಿಲ್ಪಿಯವರ ಅಭಿಪ್ರಾಯದಲ್ಲಿ ಸರಿ ಇರುವುದಿಲ್ಲವೆಂದು ಹೇಳಿದ್ದೀರಿ, ವಾಸ್ತುಶಿಲ್ಪಿಯವರು ಏತಕ್ಕೆ ಸರಿಯಿಲ್ಲವೆಂದು ಹೇಳಿದ್ದಾರೆ ಅದರ ಬಗ್ಗೆ ವಿವರ ಕೊಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ.— ಮಾನ್ಯ ಸದಸ್ಯರಿಗೆ ವಿವರ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು. — ಪ್ರಶ್ನೆ : **183 (637)** ಸದಸ್ಯರು ಗೈರುಹಾಜರಿ.

ವಿಷಯ : ಲಿಂಗಸೂಗೂರು ತಾಲ್ಲೂಕಿನ ಮಸ್ಕಿಯಿಂದ ಕವಿತಾಳ, ತೋಳದನ್ನಿಯಿಂದ ಪೋತನಾಳ ಮತ್ತು ದಣಗಿಯಿಂದ ಹಿರೇಕೋಟ್ನೆಕಾಳ್ ರಸ್ತೆಗಳ ದುರಸ್ತಿ ಕುರಿತು.

ಪ್ರಶ್ನೆ : 183 (637) ಶ್ರೀ ಬಸವರಾಜ್ ಪಾಟೀಲ್ ಅನ್ವಾರಿ (ಲಿಂಗಸೂಗೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಸ್ಕಿಯಿಂದ ಕವಿತಾಳ ರಸ್ತೆ, ತೋಳದನ್ನಿಯಿಂದ ಪೋತನಾಳ ರಸ್ತೆ ಹಾಗೂ ದಣಗಿ ಹಿರೇಕಟ್ನಕಲ್ ರಸ್ತೆಗಳ ದುರಸ್ತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ರಸ್ತೆಗಳನ್ನು ಯಾವಾಗ ದುರಸ್ತಿಗೊಳಿಸಲಾಯಿತು. ಹಾಗೂ ಈ ರಸ್ತೆಗಳಿಗೆ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಖರ್ಚು ಮಾಡಲಾಗಿದೆ?

ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ಮಾನ್ಯರು ರಸ್ತೆಗಳ ಪೈಕಿ ಮಸ್ಕಿಯಿಂದ ಕವಿತಾಳದವರೆಗೆ ಇರುವ ರಸ್ತೆಯು ಮಾತ್ರ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಇನ್ನುಳಿದ ಎರಡು ರಸ್ತೆಗಳು ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಇವೆ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯ ದುರಸ್ತಿ ಕಾರ್ಯವನ್ನು ಪ್ರತಿ ವರ್ಷದಲ್ಲೂ ಆ ಸಾಲಿನ ಹಣದ ಲಭ್ಯತೆಗನುಗುಣವಾಗಿ ಮಾಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಪ್ರತಿ ವರ್ಷವೂ ಮೇಲ್ಕಾಣಿಸಿದ ಮಸ್ಕಿ ಕವಿತಾಳ ರಸ್ತೆಗೆ ಖರ್ಚು ಮಾಡಿರುವ ಹಣದ ವಿವರ ಈ ರೀತಿ ಇದೆ.

ವರ್ಷ	ಖರ್ಚು ಮಾಡಿರುವ ಹಣ		ಒಟ್ಟು
	337 ಶೀರ್ಷಿಕೆ	537 ಶೀರ್ಷಿಕೆ	
	ರೂ.ಗಳಲ್ಲಿ		
1978-79	92,627-00	—	92,627-00
1979-80	53,090-00	—	53,090-00
1980-81	61,550-00	1,91,800-00	2,53,350-00
1981-82	52,400-00	32,450-00	84,850-00
1982-83	87,000-00	—	87,000-00
1983-84 (31-12-83ರವರೆಗೆ)	75,000-00	—	75,000-00
ಒಟ್ಟು	4,21,677-00	2,24,250-00	6,45,917-00

ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ : ಚಿಕ್ಕೋಡಿ ತಾಲ್ಲೂಕಿನ ಗಡಿಭಾಗದ ರಸ್ತೆಗಳ ದುರಸ್ತಿ ಬಗ್ಗೆ

ಪ್ರಶ್ನೆ : 184 (577) ಶ್ರೀ ಎ ಎ. ನಿಂಬಾಳ್‌ಕರ್ (ಸದಲಗ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಚಿಕ್ಕೋಡಿ ತಾಲ್ಲೂಕಿನ ಗಡಿಭಾಗದ ರಸ್ತೆಗಳು ದಃಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;